**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**OS**- 143/2024 **ಡಿ ಡಬ್ಲ್ಯೂಃ1**

**ದಿಃ27.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಪ್ರತಿವಾದಿ ಪರ ವಕೀಲರಾದ ಶ್ರೀ ಎಸ ಕಟ್ಟಿರವರಿಂದಃ**

ನಾನು ನನ್ನ ತಕರಾರಿಗೆ ಸಂಬಂಧಿಸಿದಂತೆ ಮುಂದುವರೆದು ಸರ್ವೆ ನಂಬರ 605 ಬ/ಪ್ಲಾಟ ನಂಬರ 114 ಉಣಕಲ್ ಗ್ರಾಮದ 2025-2026 ನೇ ಸಾಲಿನ 2 ಪುಟದ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಶಾನೆ ಡಿ 1 ಎಂದು, ಸರ್ವೆ ನಂಬರ 333/1+2/ಅ ಬ್ಲಾಕ/ಪ್ಲಾಟ ನಂಬರ 110 ಗಾಮನಗಟ್ಟಿ ಗ್ರಾಮದ 2025-2026 ನೇ ಸಾಲಿನ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಶಾನೆ ಡಿ 2 ಎಂದು, ಮೂರು ಖರೀದಿ ಪತ್ರಗಳ ದೃಢೀಕೃತ ನಕಲಗಳನ್ನು ಹಾಜರುಪಡಿಸಿದ್ದು ಸದರಿ ದಾಖಲೆಗಳನ್ನು ನಿಶಾನೆ ಡಿ 3 ರಿಂದ ನಿಶಾನೆ ಡಿ 5 ಎಂದು, ಸಂಗಪ್ಪ ಮೆಣಸಿಗಿ ಇವರ ಗುರ್ತಿನ ಚೀಟಿಯನ್ನು ನಿಶಾನೆ ಡಿ 6 ಎಂದು, ದಿಃ30-01-2008 ರ ಸ್ವ-ಇಚ್ಛಾ ನಿವೃತ್ತಿಗೆ ಸಂಬಂದಿಸಿದ ದಾಖಲೆಯನ್ನು ನಿಶಾನೆ ಡಿ 7 ಎಂದು, 3 ಪುಟದ ಸಾಲ ಮಂಜುರಾತಿ ದಾಖಲೆಯನ್ನು ನಿಶಾನೆ ಡಿ 8 ಎಂದು, 2 Emergency admission certificate ಗಳನ್ನು ಹಾಜರುಪಡಿಸಿದ್ದು ನಿಶಾನೆ ಡಿ 9 ಮತ್ತು ನಿಶಾನೆ ಡಿ 10 ಎಂದು, ಒಂದು Final bill ನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಶಾನೆ ಡಿ 11 ಎಂದು, ಎಸಬಿಐ ಗೆ ಸಂಬಂಧಿಸಿದ 2 ಪುಟದ ಸ್ಟೆಟಮೆಂಟ ಆಫ ಅಕೌಂಟನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಶಾನೆ ಡಿ 12 ಎಂದು, ಒಟ್ಟು 6 ಪುಟದ ಲೋನ ಸ್ಯಾಕ್ಷನ ಲೇಟರನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಶಾನೆ ಡಿ 13 ಎಂದು, ಕ್ರಿಮೀನಲ್ ಮೀಸಲೇನಿಯಸ್ 41/2022 ರ ಸಂಪೂರ್ಣ ಆಜ್ಞಾ ಪುಟದ ದೃಢೀಕೃತ ನಕಲನ್ನು ನಿಶಾನೆ ಡಿ 14 ಎಂದು, ಸದರಿ ಪ್ರಕರಣದ ಮುಖ್ಯ ಅರ್ಜಿಗೆ ಸಲ್ಲಿಸಲಾದ ತಕರಾರಿನ ದೃಢೀಕೃತ ನಕಲನ್ನು ನಿಶಾನೆ ಡಿ 15 ಎಂದು ಗುರ್ತಿಸಲಾಯಿತು.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಗೈರು ಹಾಜರಿರುವ ಕಾರಣ ಪಾಟೀ ಸವಾಲನ್ನು ಮುಂದುಡಲಾಯಿತು.)

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ